## ರಿಚರ್ಡ್ ಲೂಯಿಸ್ ಖ್ಯಾತ ನಗೆ ಮಾತುಗಾರ

# ಯಾವತ್ತೂ ಜೀವನದಲ್ಲಿ ನಾವು ಸೋಡಾದಂಗಿರಬೇಕು..!



ಸಂದರ್ಶನ: ಎನ್.ರಾಮನಾಥ್

☺ 'ರೀಚಾರ್ಜ್ ರಿಚಿ'ಯವರೆ, ನೀವು ಕೇಳಿದ/ವೀಕ್ಷಿಸಿದ ಅತ್ಯುತ್ತಮ ಹಾಸ್ಯ ಪ್ರಸಂಗ ಯಾವುದು?

ರಿಚರ್ಡ್: ಗಾನವಿನೋದಿನಿಯ ಭಾಗ್ಯದ ಲಕ್ಷ್ಮಿ ಬಾರಮ್ಮ. ಆ ಪ್ರಸಂಗದಲ್ಲಿ ಹಾಡೋವ್ನು ರಫೀಕ್ ಅಂತ ಗೊತ್ತು, ಹಾಡೂ ಗೊತ್ತಿರೋದೇ. ಆದ್ರೂ ಪ್ರತಿ ಪದಾನೂ ಎಸ್ಸರತ್ತೇಂತ ಎಲ್ರೂ ಬಾಯ್ಬಿಟ್ಕೊಂಡು, ಕಣ್ಣರಳಿಸ್ಕೊಂಡು, ಕುತೂಹಲದಿಂದ ಕಾಯ್ತ ಇರ್‍ತಾರೆ. ಮೊದಲು ಶಾಸ್ತ್ರಿಗಳು ಹಾಡಿ, ಕೆಮ್ಮಿ ನಿಲ್ಸಿದ ಹಾಡನ್ನ ರಫೀಕ್ ಈ ರೀತಿ ಮುಂದ್ವರಿಸ್ತಾನೆ.

ಭಾಗ್ಯಂದು ಲಕ್ಷ್ಮಿಗೆ ಬಾರಮ್ಮ ನಮ್ಮಮ್ಮಂದು ಇಸ್ತ್ರೀ ಗೌರಿ
ಭಾಗ್ಯಂದು ಲಕ್ಷ್ಮಿಗೆ ಬಾರಮ್ಮ
ಹೆಜ್ಜೇದು ಮೇಲೆ ಹೆಜ್ಜೇದು ಇಟ್ಟಿಟ್ಟ ಗೆಜ್ಜೇದು ಕಾಲಿಂದು ಸಪ್ಪ ಮಾಡ್ಬಿಟ್ಟ
ಸಜ್ಜನ್ದು ಸಾಧೂದು ಪೂಜೇದೂ ಠೇಮಿಗೇ ಮಜ್ಜಿಗೆ
ಒಳ್ಗಿಂದ ಮಖ್ಖನ್‌ದು ಅಂಗೇ
ಭಾಗ್ಯಂದು ಲಕ್ಷ್ಮಿಗೆ ಬಾರಮ್ಮ
ಶಕ್ಕರ್‌ಗೆ ತುಪ್ಪ ಹಾಲ್ನೊಳ್ಗೆ ಬೆರ್‍ಸ್ಬಿಟ್ಟ ಶುಕ್ರವಾರಂದು
ನಮಾಜ್ದೂ ಠೇಮಿಗೇ
ಅಕ್ರೇದ್ದು ಉಳ್ಳದ್ದು ಅಲ್ಗಿರಿ ರಂಗದ್ದೂ ಚೊಕ್ಕಪುರಂದರ್ದೂ
ವಿಠಲಂದೂ ಬೇಗಮ್‌ಮ್‌ಮ್‌ಮ್
ಭಾಗ್ಯಂದು ಲಕ್ಷ್ಮಿಗೆ ಬಾರಮ್ಮ

ಈ ಹಾಡು ಇವತ್ತಿನವರೆಗೆ ಎಲ್ಲೂ ಫ್ಲಾಪ್ ಆಗಿಲ್ಲ, ಇದರಿಂದ ಸಿಗೋ ಲಾಫ್ಟರ್ ಲೆವೆಲ್ ಇನ್ಯಾವುದರಲ್ಲೂ ರೀಚ್ ಆಗಕ್ಕಾಗಲ್ಲ.

☺ ನಿಮ್ಮ ಜೀವನದಲ್ಲಿ ನಡೆದ ಹಾಸ್ಯದ ಘಟನೆ ಯಾವುದಾದರೂ ಹೇಳ್ತೀರಾ?

ರಿಚರ್ಡ್: ನನ್ನ ಮದುವೆಗೂ ಮುಂಚಿನ ದಿನಗಳು, ನಾನು ಒಬ್ಬಳನ್ನ ಮದುವೆ ಆಗ್ಬೇಕೂಂತ ಇಷ್ಟ ಪಟ್ಟಿದ್ದೆ. ಹೇಗಾದರೂ ಮಾಡಿ ಅವಳ ಪಕ್ಕ ಕೂತು ಮಾತ್ನಾಡ್ಬೇಕೂಂತ ಸ್ಕೆಚ್ ಹಾಕ್ತಾನೇ ಇದ್ದೆ. ಒಂದು ದಿನ ನನ್ನ ಫ್ರೆಂಡು ಆರ್. ನಾಗೇಶ್ ಡೈರೆಕ್ಟ್ ಮಾಡಿದ ಒಂದು ನಾಟಕಕ್ಕೆ ಆ ಹುಡುಗೀನೂ, ಅವರ ಅಮ್ಮನನ್ನೂ (ಅವರು ಸಮಾಜದಲ್ಲಿ ಒಳ್ಳೆಯ ಹೆಸರು ಮಾಡಿದ್ದ ವಿಐಪಿ) ಕರೆದೆ. ಇಬ್ರೂ ಬಂದ್ರು. ಹುಡುಗಿ ಬಲಕ್ಕೆ ಅವರಮ್ಮನ್ನ ಕೂಡಿಸಿ ಎಡಕ್ಕೆ ನಾನು ಕೂತ್ಕೋಬೇಕೂಂತ ಪ್ಲಾನ್ ಹಾಕಿದ್ದೆ. ಹೇಳಿದ್ನಲ್ಲಾ ಅವರಮ್ಮ ವಿಐಪೀಂತ, ಯಾರೋ ವಕ್ರಿಸೋದು, ನಾನು ಸೀಟ್ ಬಿಡೋದು, ಅವರು ಮಾತಾಡಿ ಹೋದ್ಮೇಲೆ ಕೂತ್ಕೊಳ್ಳಕ್ಕೆ ಹೋಗೋದು, ಮತ್ಯಾರೋ ವಕ್ರಿಸೋವ್ರು. ಅಂತೂ ಇಂತೂ ನಾಟಕ ಶುರು ಮಾಡಕ್ಕೆ ಲೈಟ್ ಆಫ್ ಮಾಡುವ ಸಮಯಕ್ಕೆ ಹುಡ್ಗೀಪಕ್ಕದ್ ಸೀಟ್ ಗಿಟ್ಟಿಸ್ಕೊಂಡೆ.

ಆದ್ರೆ ನಾಟಕ ಶುರು ಆಗೋದ್ರ ಬದಲು ಯಾರೋ ಬ್ಯಾಟರಿ ಹಿಡ್ಕೊಂಡು ಯಾರ್‍ನೋ ಹುಡ್ಕಕ್ಕೆ ಶುರು ಮಾಡಿದ್ರು. ಆಡಿಯನ್ಸಲ್ಲಿ ರಿಚಿ ಇದಾನಂತೆ ನೋಡೋ ಅಂತ ಪಿಸುಮಾತು ಬೇರೆ! ನೋಡಿದ್ರೇ... ಅವತ್ತು ಭೂತಕೋಲದ ಪಾತ್ರ ಮಾಡೋ ಶಶಿಧರ್ ಅಡಪ ಮಿಸ್ಸಿಂಗು, ಸಬ್‌ಸ್ಟಿಟ್ಯೂಟ್ ಆಗಿ ಆಕ್ಟ್ ಮಾಡಕ್ಕೆ ನನಗೆ, ಸುಧೀಂದ್ರನಿಗೆ ಮಾತ್ರ ಆಗ್ತಿತ್ತು, ಸುಧೀನೂ ಅವತ್ತು ಪತ್ತೆ ಇಲ್ಲ. ನಾನೊಬ್ನೇ ಇದ್ದೆ, ಟಾರ್ಚ್ ಲೈಟ್‌ಗೆ ಸಿಕ್ಬಿದ್ದೆ. ಎರಡೇ ನಿಮಿಷ ಸಾರ್ ಹುಡುಗಿ ಪಕ್ಕ ಕೂತಿದ್ದಿದ್ದು, ಇನ್ನೂ ಗಂಟಲು ಸರಿ ಮಾಡ್ಕೊಂಡು ಅವಳನ್ನು ಮಾತಾಡ್ಸೋವಷ್ಟರಲ್ಲೇ ಈ ಅವಾಂತರ.

ಸ್ಟೇಜ್‌ಗೆ ಹೋದೆ. ಅಲ್ಲಿಂದಾದ್ರೂ ಹುಡುಗೀನ ಇಂಪ್ರೆಸ್ ಮಾಡ್ಬೇಕೂಂತ ಕೋಲದ ವಿಗ್ ಹಾಕ್ಕೊಂಡು, ಜೋರಾಗಿ ಕೂಗ್ತಾ ಧಂಗ್ ಅಂತ ನೆಗೀತಾ, ರೋಷ ಸೂಚ್ಸಕ್ಕೆ ಕತ್ತು ಛಕಾರ್ ಅಂತ ತಿರುಗಿಸ್ದೆ.

ತಿರುಗಿಸಿದ ರಭಸಕ್ಕೆ ಹಾಕ್ಕೊಂಡಿದ್ ವಿಗ್ಗು ಹೋಗಿ ಆಡಿಯನ್ಸ್ ಮಧ್ಯೆ ಬಿತ್ತು. ಜನರೆಲ್ಲಾ ಹೋ.... ಅಂದ್ರು.

ಹುಡುಗಿ ಇಂಪ್ರೆಸ್ ಆದ್ಳೋ ಇಲ್ವೋ, ಅವಳು ಫಕ್ಕಂತ ನಕ್ಕಿದ್ದೇ ನನಗ್ಸಿಕ್ಕಿದ್ ಭಾಗ್ಯ!

☺ ಮೂರ್ಖರ ದಿನವಾದ ಏಪ್ರಿಲ್ 1 ಅನ್ನು ಹೇಗೆ ಆಚರಿಸಿದಿರಿ?

ರಿಚರ್ಡ್: ಬೇರೆ ದಿನಗಳ ತರಹವೇ. ಅವರಿವರಿಗೆ ಕಾಲೆಳೆದು, ಅವರಿವರಿಂದ ಕಾಲೆಳಿಸ್ಕೊಂಡು, ಅವತ್ತಿನ ದಿವಸ ಮಾಮೂಲಿಗಿಂತಲೂ ಹೆಚ್ಚಿನ ಜೋಶ್‌ನಿಂದ ಭಾಷಣ ಮಾಡಿ ಜನರನ್ನ ನಗಿಸೋದ್ರಲ್ಲಿ ಸಕ್ಸೀಡ್ ಆದೆ.

☺ ನಿಮ್ಮ ಫೇವರೈಟ್ ಹಾಸ್ಯದ ತುಣುಕು?

ರಿಚರ್ಡ್: ಜೀವನದಲ್ಲಿ ನಾವು ಯಾವತ್ತೂ ಸೋಡಾ ಇದ್ದಾಗಿರ್ಬೇಕು. ಅದು ವಿಸ್ಕೀಗೂ ಹೊಂದತ್ತೆ, ರಮ್‌ಗೂ, ಹೊಂದತ್ತೆ. ಜಿನ್‌ಗೂ ಹೊಂದತ್ತೆ. ಹಾಗೇನೂ ಕುಡೀಬಹುದು. ನಾವೂ ಸೋಡಾ ತರಹ ಇದ್ರೆ ಇಡೀ ಸೊಸೈಟಿ ಜೊತೆ ಬೆರೆತು ನಲೀಬಹುದು.

☺ ರಾಜಕೀಯ ಅಂದ್ರೆ ಏನು?

ರಿಚರ್ಡ್: 'ಟು ಎರ್‍ರ್ ಈಸ್ ಹ್ಯೂಮನ್, ಟು ಎನ್‌ಕ್ಯಾಶ್ ಈಸ್ ಪಾಲಿಟಿಕ್ಸ್'!